ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ: ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ 2018-19ನೇ ಸಾಲಿನ "ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ" ಅಡಿಯಲ್ಲಿ 2.00 ಕೋಟಿಗೂ ಕಡಿಮೆ ಮೊತ್ತ ಇರುವ ಕಾಮಗಾರಿಗಳನ್ನು ಮೇಸ್ ಕೆ.ಅರ್.ಐ.ಡಿ.ಎಲ್ ಸಂಸ್ಥೆಯಿಂದ ಅನುಷ್ಠಾನಗೊಳಿಸುವ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಅಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಪುಟದ ಸಂಖ್ಯೆ 15

ಕಡತದ ಸಂಖ್ಯೆ BBMP/ಮ.ನ.ಇ/ಟಿಪ್ಪಣಿ/2018-19

ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ಉಲ್ಲೇಖ
1. ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ಬೈ 2018, ಬೆಂಗಳೂರು, ದಿನಾಂಕ:20/09/2019.
2. ಮಾನ್ಯ ಅಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಕಛೇರಿ ಸುತ್ತೋಲೆ ಸಂಖ್ಯೆ: ಅಯುಕ್ತರು/ಪಿಅರ್359/2019-20 ದಿನಾಂಕ:01.10.2019
3. ತಿದ್ದುಪಡಿ ಸುತ್ತೋಲೆ ಸಂಖ್ಯೆ: ಅಯುಕ್ತರು/ಪಿಅರ್/3139/2019-20 ದಿನಾಂಕ:05.10.2019
4. ಸರ್ಕಾರದ ಆದೇಶ ಸಂಖ್ಯೆ: ನ.ಅ.ಇ/250/ಎಂ.ಎನ್.ಬೈ 2019 ದಿನಾಂಕ:15.10.2019
5. ವಿಶೇಷ ಅಯುಕ್ತರು.(ಯೋಜನೆ)ರವರ ಅಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ವಿ.ಅ (ಯೋ)/ಪಿ.ಅರ್/945/19-20 ದಿನಾಂಕ:06.06.2019

(1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2018-19 ನೇ ಸಾಲಿನಲ್ಲಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ" ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿರುವ ರೂ. 2500.00 ಕೋಟಿಗಳ ಜೋತೆಯಲ್ಲಿ ರೂ. 5515.37 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ. 8015.37 ಕೋಟಿಗಳ ಮೊತ್ತ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಪರತ್ತುಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ.

(2) ಸದರಿ ಸರ್ಕಾರದ ಆದೇಶದ ಅನುಬಂಧ ಸಂಖ್ಯೆ-02 ರಲ್ಲಿ "ರಸ್ತೆಗಳ ಅಭಿವೃದ್ಧಿ" ಎಂಬ ವಿವರದ ನಾಮಕಿಂತದಡಿಯಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ.

Sl No	Ward No	Name of Sub Division	Type	Sl No As in G.O	Jobcode	Name of the work as in Government Order	Amount (Rs in Lakhs)
1	14	Dasarahalli	SC-SP/TSP	88	014-20-000016	Improvements to roads and drains at Mahalakshmi Layout in Ward no. 14, Dasarahalli Sub Division	99.00

(3) ಸದರಿ ಕಾಮಗಾರಿಯಲ್ಲಿ ಸೇರಿರುವ ಎಲ್ಲಾ ರಸ್ತೆಗಳನ್ನು ವೈಯಕ್ತಿಕವಾಗಿ ಸ್ಥಳ ಪರಿಶೀಲನೆ ಮಾಡಿದ್ದು ಈ ಕೆಳಕಂಡಂತೆ ದೃಢೀಕರಿಸಲಾಗಿದೆ.

- ಪ್ರಾಸ್ತಪಿಸಿರುವ ಎಲ್ಲಾ ರಸ್ತೆಗಳನ್ನು ಬೇರೆ ಯಾವುದೇ ಅನುದಾನಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ.
- ಸದರಿ ಪ್ರಸ್ತಾಪಿಸಿರುವ ರಸ್ತೆಗಳು ಬಹಳಷ್ಟು ಹಾಳಾಗಿದ್ದು ಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ.
- ಸದರಿ ಪ್ರಸ್ತಾಪಿಸಿರುವ ರಸ್ತೆಗಳಲ್ಲಿ ಸುಮಾರು 3 ವರ್ಷಗಳಿಂದ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ ಹಾಗೂ ಡಿ.ಎಲ್.ಪಿ ಅವಧಿಯಿಂದ ಮುಕ್ತವಾಗಿರುತ್ತದೆ.

Scanned by CamScanner

ವಿಷಯ ವಾರ್ಡ್ ನಂ 14 ರಲ್ಲಿ ವ್ಯಾಪ್ತಿಯಲ್ಲಿ 2018-19 ನೇ ಪುಟದ ಸಂಖ್ಯೆ .....
ಸಾಲಿನ ಮಹಾಲಕ್ಷ್ಮಿ ಲೇಔಟ್ ನಲ್ಲಿ ನವ ನಗರೋತ್ಥಾನ ಯೋಜನೆಯಡಿ ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	• ಸದರಿ ಪ್ರಸ್ತಾಪಿಸಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಸ್ಥಳಕ್ಕೆ ಅನುಗುಣವಾದ ಅಂಶಗಳನ್ನು ಅಳವಡಿಸಿಕೊಂಡು ವಿವರವಾದ ಯೋಜನಾ ವರದಿ (ಡಿ.ಪಿ.ಆರ್)ನ್ನು 2018-19 ನೇ ಸಾಲಿನ ಪಿ.ಡ್ಯೂ.ಡಿ ಇಲಾಖೆಯ ದರಪಟ್ಟಿ ದರಗಳನ್ವಯ ತಯಾರಿಸಲಾಗಿದೆ. • ಸದರಿ ಪ್ರಸ್ತಾಪಿಸಿರುವ ರಸ್ತೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಡಾಂಬರೀಕರಣ, ಕಾಂಕ್ರೀಟ್ ರಸ್ತೆ ಮತ್ತು ಚರಂಡಿಗಳನ್ನು ನಿರ್ಮಾಣ ಮಾಡಲು ಅನುವು ಮಾಡಿಕೊಳ್ಳಲಾಗಿದೆ. • ಸದರಿ ಪ್ರಸ್ತಾಪಿಸುವ ರಸ್ತೆಗಳ ಹಾಲಿ ಸ್ಥಿತಿಯ ಬಗ್ಗೆ ಛಾಯಾ ಚಿತ್ರಗಳನ್ನು ಲಗತ್ತಿಸಿದೆ. • 2019 ನೇ ಸಾಲಿನ ಆಗಸ್ಟ್, ಸೆಪ್ಟೆಂಬರ್ ಮಾಹೆಯಲ್ಲಿ ಬಿದ್ದ ಬಾರಿ ಮಳೆಯಿಂದ ಸದರಿ ರಸ್ತೆಗಳು ಹಾಳಾಗಿದ್ದು ಸ್ಥಳೀಯ ನಿವಾಸಿಗಳಿಗೆ ಬಹಳಷ್ಟು ಅಸಾನುಕೂಲವಾಗಿರುತ್ತದೆ.ಸದರಿ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆ ಮುಖೇನ ಅನುಷ್ಠಾನಗೊಳಿಸಲು ತುಂಬ ವಿಳಂಭವಾಗುವುದೆಂದು ಪಾಲಿಕೆ ಸದಸ್ಯರು ಅಭಿಪ್ರಾಯಪಟ್ಟಿದ್ದು ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು ಕೋರಿರುತ್ತಾರೆ. • ಸದರಿ ಕಾಮಗಾರಿಯಲ್ಲಿನ ಪ್ರಾಸ್ತಾಪಿತ ಪ್ರದೇಶದಲ್ಲಿ ಉದ್ದೇಶ (05) ರ ಅನ್ವಯ ಶೇ: 50.00% ಕಿಂತ ಕಡಿಮೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಂಡದವರು ವಾಸವಾಗಿರುತ್ತಾರೆ.
(4)	ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಲು ಕೋರಿ ಕಡತ ಮಂಡಿಸಿದೆ. 1. ಉದ್ದೇಖ (4) ರ ಸರ್ಕಾರದ ಆದೇಶದ ಅನ್ವಯ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು ಅನುಮೋದನೆ. 2. ಸದರಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ. ಸಹಾಯಕ ಅಭಿಯಂತರರು ವಾರ್ಡ್ ನಂ : 14 28.X.19 ಸಹಾಯಕ ಕಾರ್ಯಪಾಲಕ ಅಭಿಯಂತರರು 28.10.19 ದಾಸರಹಳ್ಳಿ ಉಪ ವಿಭಾಗ
(5)	ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ ಕಂಡಿಕೆ (1) ರಿಂದ (4) ರವರೆಗಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ಉಪ-ವಿಭಾಗ ರವರ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ (3) ರಂತೆ ಅನುಮೋದನೆ ನೀಡಲು ಕಡತ ಸಲ್ಲಿಸಿದೆ. ಕಾರ್ಯಪಾಲಕ ಅಭಿಯಂತರರು 30/10/19 ದಾಸರಹಳ್ಳಿ ವಿಭಾಗ EXECUTIVE ENGINEER Bruhat Bangalore Mahanagara Palike, Dasarahalli Division, Bangalore-57
(6)	ಮುಖ್ಯ ಅಭಿಯಂತರರು (ದಾ.ವ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ವಾರ್ಡ್ ನಂ 14 ರಲ್ಲಿ ವ್ಯಾಪ್ತಿಯಲ್ಲಿ 2018-19 ನೇ ಪುಟದ ಸಂಖ್ಯೆ -3-
ಸಾಲಿನ ಮಹಾಲಕ್ಷ್ಮಿ ಲೇಔಟ್ ನಲ್ಲಿ ನವ ನಗರೋತ್ಥಾನ ಯೋಜನೆಯಡಿ ಕಡತದ ಸಂಖ್ಯೆ BBMP/ADM/DAS/ಎಂಜಿ/ಟೆಂಡರ್/18-19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಕಂಡಿಕೆ (01) ರಿಂದ (05) ರವರೆಗಿನ ವರದಿಯನ್ನು ಅವಗಾಹನೆಗೆ ಕರುತ್ತಾ, ಸದರಿ ಕಾಮಗಾರಿಯ ಮೊತ್ತ ರೂ. 99.00 ಲಕ್ಷಗಳಾಗಿದ್ದು, ನವ ನಗರೋತ್ಥಾನ ಅಡಿಯ SCSP/TSP ಯಲ್ಲಿ ಜಾಬ್ ಕೋಡ್ ನೀಡಲಾಗಿದ್ದು, ಘನ ಸರ್ಕಾರದ ಆದೇಶ ಸಂಖ್ಯೆ: ನಅಇ/250/ಎಂ.ಎಸ್.ಪೈ/2019, ದಿನಾಂಕ: 15.10.2019ರ ಆದೇಶದಂತೆ ಸದರಿ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್ ಪತಿಯಿಂದ ಕೈಗೊಳ್ಳಲಲು ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಲು ಆದೇಶಕ್ಕಾಗಿ ಸಲ್ಲಿಸಿದೆ. ಮುಖ್ಯ ಅಭಿಯಂತರರು (ದಾ.ವ) 30/10/19
(7)	ಜಂಟಿ ಆಯುಕ್ತರು (ದಾ.ವ) ಕಂಡಿಕೆ (06)ರಂತೆ ಒಪ್ಪಬಹುದಾಗಿದೆ. ಆದೇಶಕ್ಕಾಗಿ ಕಡತ ಮಂಡಿಸಿದೆ, ಜಂಟಿ ಆಯುಕ್ತರು (ದಾ.ವ) 30/10/19
(8)	Zonal Commissioner (Dasarahalli) ದಿನಾಂಕ: 30.10.2019 ರಂದು ಪ್ರಸ್ತಾಪಿತ ಕಡತವನ್ನು ಮಾನ್ಯ ವಲಯ ಆಯುಕ್ತರು (ದಾಸರಹಳ್ಳಿ) ರವರಿಗೆ ಸಲ್ಲಿಸಲಾಗಿ, ಸದರಿ ರವರು ಅಂದಾಜು ಪಟ್ಟಿಯ ಕಡತ ನಿರ್ವಹಣೆ ಬಗ್ಗೆ ಕೆಲವೊಂದು ಸೂಚನೆಯನ್ನು ನೀಡುತ್ತಾ, ಅದರಂತೆ, ಕಡತವನ್ನು ಮರು ಮಂಡಿಸಲು ಆದೇಶ ನೀಡಿರುವ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಅಂದಾಜು ಪಟ್ಟಿಯ ಕಾಮಗಾರಿಯ ಕಡತವನ್ನು ಮರು ಮಂಡಿಸಿದೆ. • ಪ್ರಸ್ತಾಪಿತ ಕಾಮಗಾರಿಯು ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯಲ್ಲಿ ದಾಸರಹಳ್ಳಿ ವಿದಾನ ಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ಅನುದಾನದಡಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿ ವಿಷಯಕ್ಕೆ ಸಂಬಂಧಿಸಿರುತ್ತದೆ. • ಸದರಿ ಕಾಮಗಾರಿಗೆ "Improvements to roads and drains at Mahalakshmi Layout in ward no 14 Dasrahalli Sub Division" ಎನ್ನುವ ಶಾಮಾಂಕಿತದಡಿಯಲ್ಲಿ ರೂ. 99.00 ಲಕ್ಷ ಅನುದಾನವನ್ನು ನಿಗಧಿಪಡಿಸಲಾಗಿದೆ.
(9)	ಪ್ರತಿಸೋ

Scanned by CamScanner

ವಿಷಯ :

ಪುಟದ ಸಂಖ್ಯೆ -4-
ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	• ಈ ಕಾಮಗಾರಿಗೆ "ಕಾಮಗಾರಿ ಸಂಖ್ಯೆ ಪ್ರಮಾಣ ಪತ್ರ"ವನ್ನು ನೀಡಲಾಗಿರುತ್ತದೆ. (014-20-000016) • ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2018-19ರ ದರಪಟ್ಟಿಯ ದರಗಳನ್ವಯ ತಯಾರಿಸಲಾಗಿರುತ್ತದೆ. • ಪ್ರಸ್ತಾಪಿತ ಕಾಮಗಾರಿಯನ್ನು ಖುದ್ದಾಗಿ ಪರಿಶೀಲಿಸಲಾಗಿದ್ದು, ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಅಂಶಗಳು ಸ್ಥಳಕ್ಕನುಗುಣವಾಗಿರುತ್ತದೆ ಹಾಗೂ ಈ ಕಾಮಗಾರಿಯನ್ನು ಬೇರೆ ಅನುದಾನದಲ್ಲಿ ಕೈಗೊಂಡಿರುವುದಿಲ್ಲ.
(10)	ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕಂಡಿಕೆ (4)ರಂತೆ ಅನುಮೋದನೆ ಕೋರಿ ಕಡತ ಮಂಡಿಸಿದೆ. ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ
(11)	ಮುಖ್ಯ ಅಭಿಯಂತರರು (ದಾ.ವ) ಪ್ರಸ್ತಾಪಿತ ಕಾಮಗಾರಿಯ ಸ್ಥಳ ಪರಿಶೀಲಿಸಿ ಕಾಮಗಾರಿಯ ಅಗತ್ಯತೆ ಬಗ್ಗೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ರವರು ಹಾಗೂ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಕಂಡಿಕೆ (3) ಮತ್ತು (5)ರಲ್ಲಿ ವರದಿ ಮಾಡುತ್ತಾ, ಸ್ಥಳೀಯ ನಿವಾಸಿಗಳಿಗೆ ಅನುಕೂಲವಾಗುವುದರ ಸಂಬಂಧ ಕಾಮಗಾರಿಯನ್ನು ಜರೂರಾಗಿ ಅನುಷ್ಠಾನ ಗೊಳಿಸಲು ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖೇನ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆಯನ್ನು ಮಂಡಿಸಿರುತ್ತಾರೆ.
(12)	ಸದರಿ ಕಾಮಗಾರಿ ಸ್ಥಳವನ್ನು ಪರಿವೀಕ್ಷಿಸಲಾಗಿದ್ದು, ಕಾಮಗಾರಿ ಅವಶ್ಯವಿರುತ್ತದೆ. ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕಂಡಿಕೆ (10)ರಲ್ಲಿ ಪ್ರಸ್ತಾವನೆಯ ಅನುಮೋದನೆಗಾಗಿ ಆದೇಶ ಕೋರಬಹುದಾಗಿದೆ. ಮುಖ್ಯ ಅಭಿಯಂತರರು (ದಾ.ವ) 4/11/2019
(13)	ಜಂಟಿ ಆಯುಕ್ತರು (ದಾ.ವ) ಕಂಡಿಕೆ (12)ರಂತೆ ಒಪ್ಪಬಹುದಾಗಿದೆ. ಆದೇಶಕ್ಕಾಗಿ ಕಡತ ಮಂಡಿಸಿದೆ. ಜಂಟಿ ಆಯುಕ್ತರು (ದಾ.ವ) 5/11/19
(14)	Zonal Commissioner (Dasarahalli)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ : Improvements to roads and drainage at Mahalakshmi Layout in ward No-14 Dasarahalli Sub Div

ಪುಟದ ಸಂಖ್ಯೆ -05-
ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	Submitted for approval as recommended by Chief Engineer. The Chief Engineer has to certify that the work is of emergency nature and to be taken up immediately. (Since, in the G.O. dated:15-10-2019, regarding handing over of works to KRIDL, it is clearly mentioned) The Chief Engineer is hereby advised to give very clear opinion in writing in the files. While execution the works CE and all other concerned officers advised to maintain following registers:- 1. ಅನುಮೋದಿತ ಆಯ-ವ್ಯಯ 2. ಅನುಮೋದಿತ ಕ್ರಿಯಾ ಯೋಜನೆ ಪಟ್ಟಿಗಳು 3. ನಗದು ವಹಿ 4. ಅನುದಾನದ ವಹಿ 5. ಧನಾದೇಶಗಳ ಕಾವಲು ವಹಿ 6. ಇಡುಗಂಟು ವಹಿ 7. ತೇವಣಿ ವಹಿ 8. ಕಾಮಗಾರಿ ವಹಿ 9. ಅಳತೆ ಪುಸ್ತಕಗಳು 10. ಕಾಮಗಾರಿ ಪಾವತಿ ಓಚರ್ಸ್ ಹಾಗೂ ಪೂರಕ ದಾಖಲಾತಿಗಳು 11. ಟೆಂಡರ್ ದಸ್ತಾವೇಜುಗಳು 12. ಕರಾರು ಪತ್ರಗಳು 13. ಹಣ ಬಳಕೆ ಪ್ರಮಾಣ ಪತ್ರಗಳು 14. Objection Watch Register ಆಕ್ಷೇಪಣೆ ಕಾವಲು ವಹಿ 15. Work Slip and EIRL Cases ಪ್ರಕರಣಗಳು 16. ಕಾಮಗಾರಿ ಮುಕ್ತಾಯ ವರದಿಗಳು 17. ಶಾಸನಬದ್ಧ ತೆರಿಗೆಗಳ ಜಮೆ ವಿವರಗಳು The file may be approved this time. Zonal Commissioner
(15)	ಕಂಡಿಕೆ 11ನ್ನು ಅನುಮೋದಿಸಲಾಗಿದೆ ವಿಶೇಷ ಆಯುಕ್ತರು 8/11/2019
(16)	Hon'ble Commissioner) ಆಯುಕ್ತರು ಪ್ರತಿನೋ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner